**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.211/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಶಶಿ | ಪ್ರಾಸಾ-6 |
| ತಂದೆಯ ಹೆಸರು | : ಕುಟ್ಟಪ್ಪ | ಚಾಸಾ-13 |
| ವಯಸ್ಸು | : 53 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ | ದಿನಾಂಕಃ 19.09.2025. |
| ವಾಸಸ್ಥಳ | : ಮೂಡಿಗೆರೆ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು 2019 ರಿಂದ 2024 ರವರೆಗೆ ಬಣಕಲ್ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.09.12.2024 ರಂದು ಮಾನ್ಯ ವೃತ್ತ ನಿರೀಕ್ಷಕರು ಮೂಡಿಗೆರೆ ರವರ ಆದೇಶದ ಮೇರೆಗೆ ಪಿ.ಎಸ್.ಐ ನಾಗರಾಜ್ ಎಂಬುವವರಿಂದ ಪ್ರಸ್ತುತ ಪ್ರಕರಣದ ಕಡವನ್ನು ಪಡೆದುಕೊಂಡು, ಅದೇ ದಿನ ತನಿಖೆಯ ಮುಂದುವರೆಸಿ, ಚಾಸಾ11 ರವರಿಂದ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ. ದಿ.28.12.2024 ರಂದು ಚಾಸಾ10 ರವರಿಗೆ ಕೃತ್ಯ ನಡೆದ ಸ್ಥಳದ ದಾಖಲಾತಿಯನ್ನು ಮನವಿಯನ್ನು ನೀಡಿರುತ್ತೇನೆ. ದಿ.16.01.2025 ರಂದು ಚಾಸಾ10 ರವರಿಂದ ಕೃತ್ಯ ನಡೆದ ಸ್ಥಳದ ದಾಖಲಾತಿಯನ್ನು ಪಡೆದಿರುತ್ತೇನೆ. ದಿ.18.01.2025 ರಂದು ಆರೋಪಿಯ ಮೇಲೆ ಆರೋಪ ಸಾಬೀತಾದ ಕಾರಣ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ದಿ.09.12.2024 ರಂದು ಚಾಸಾ11 ರವರಿಂದ ಸ್ವೀಕರಿಸಿದ ವರದಿಯನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ವರದಿಯನ್ನು ನಿಪಿ-7, ಸಾಕ್ಷಿಯು ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿ.28.12.2024 ರಂದು ಕೃತ್ಯ ನಡೆದ ಸ್ಥಳದ ದಾಖಲಾತಿಯನ್ನು ಕೋರಿ ಚಾಸಾ10 ರವರಿಗೆ ನೀಡಿದ ಮನವಿ ಪ್ರತಿಯನ್ನು ನೋಡಿ ಗುರುತಿಸಿದ್ದು ಸದರಿ ಮನವಿಯನ್ನು ನಿಪಿ-8, ಸಾಕ್ಷಿಯು ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ದಿ.16.05.2025 ರಿಂದ ಚಾಸಾ10 ರವರಿಂದ ಸ್ವೀಕರಿಸಿದ ನೋಡಿ ಗುರುತಿಸಿದ್ದು ಸದರಿ ವರದಿಯನ್ನು ನಿಪಿ-9, ಸಾಕ್ಷಿಯು ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಆರ್.ಹೆಚ್. ವಕೀಲರಿಂದಃ**

ದಿ.09.12.2024 ರಂದು ವೃತ್ತ ನಿರೀಕ್ಷಕರು ಮೂಡಿಗೆರೆ ರವರ ಆದೇಶದ ಪ್ರಕಾರ ನಾನು ಯಾವುದೇ ಪ್ರಕರಣದ ಕಡತವನ್ನು ಯಾರಿಂದ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ದಿ.09.12.2024 ರಂದು ಚಾಸಾ11 ರವರಿಂದ ಯಾವುದೇ ವರದಿಯನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ದಿ.28.12.2024 ರಂದು ಚಾಸಾ10 ರವರಿಗೆ ಯಾವುದೇ ಮನವಿ ಪತ್ರವನ್ನು ನೀಡಿರುವುದಿಲ್ಲ ಮತ್ತು ದಿ.16.01.2025 ರಂದು ಸದರಿಯವರಿಂದ ಯಾವುದೇ ಸ್ಥಳದ ದಾಖಲಾತಿಯ ಬಾಬ್ತು ವರದಿಯನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.